**ದಿನಾಂಕಃ 03.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿ**ವಾದಿ ಪರ** ಶ್ರೀ ಬಿ.ಎಂ.ಎನ್ **ವಕೀಲರಿಂದಃ**

ಈ ದಾವೆಯ ವಾದಿಯು ನಮ್ಮ ಸಂಬಂಧಿಕರು ಎಂದರೆ ಸರಿ. ಈ ದಾವೆಯ ವಾದಿಯು ಒಟ್ಟು 6 ಜನರ ವಿರುದ್ಧ ಸರ್ವೆ ನಂ. 8 ರ 27 ಗುಂಟೆ ಜಮೀನಿಗೆ ಈ ದಾವೆ ಸಲ್ಲಿಸಿರುತ್ತಾರೆ. ಸದರಿ ಸರ್ವೆ ನಂ. 8 ರ 27 ಗುಂಟೆ ಜಮೀನಿಗೆ ಚೆಕ್ಕುಬಂಧಿ ಪೂರ್ವಕ್ಕೆ -ರಸ್ತೆ, ಪಶ್ಚಿಮಕ್ಕೆ-ನಂಜೇಗೌಡರವರ ಜಮೀನು, ಉತ್ತರಕ್ಕೆ- ರಸ್ತೆ, ದಕ್ಷಿಣಕ್ಕೆ-ಚಾಮೇಗೌಡರವರ ಜಮೀನು ಇರುತ್ತದೆ. ದಾವಾ ಅನುಸೂಚಿ ಸ್ವತ್ತು ವಾದಿಗೆ ಅವರ ತಂದೆಯಿಂದ ವಿಭಾಗದ ಮೂಲಕ ಬಂದಿರುತ್ತದೆ. ಸದರಿ ವಿಭಾಗ ಪತ್ರವನ್ನು ನಾನು ನೋಡಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತಿನ ಪಹಣಿ ಪತ್ರಿಕೆಯನ್ನು ನಾನು ನೋಡಿರುತ್ತೇನೆ. ವಾದಿಯು ಈ ದಾವೆಯನ್ನು ದಾವಾ ಅನುಸೂಚಿ ಸ್ವತ್ತು ತನ್ನದು ಎಂದು ಹೇಳಿ ಸಲ್ಲಿಸಿರುತ್ತಾರೆ.

ಹುನುಗನಹಳ್ಳಿ ಗ್ರಾಮದ ಸರ್ವೆ ನಂ. 8 ರ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ಈ ದಾವೆಯ 1 ನೇ ಪ್ರತಿವಾದಿಯು ನನಗೆ ಸುಮಾರು 30 ವರ್ಷಗಳಿಂದ ಪರಿಚಿತರು. ಪೂರ್ವಕ್ಕೆ -ನಾಲೆ, ಪಶ್ಚಿಮಕ್ಕೆ-ಉಳಿಕೆ ಜಮೀನು, ಉತ್ತರಕ್ಕೆ- ರಸ್ತೆ, ದಕ್ಷಿಣಕ್ಕೆ-ಯಾಲಕ್ಕಿಗೌಡರವರ ಜಮೀನು ಈ ಚೆಕ್ಕುಬಂಧಿಯ ಒಳಗೆ 1 ನೇ ಪ್ರತಿವಾದಿಯು ಮಂಗಳೂರು ಹೆಂಚಿನ ಮನೆಯನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಯು ಸದರಿ ಮನೆಯನ್ನು ಸುಮಾರು 35 ವರ್ಷಗಳ ಹಿಂದೆ ಕಟ್ಟಿಕೊಂಡು ಅಲ್ಲಿಂದ ಇಲ್ಲಿಯವರೆಗೂ ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಮನೆಗೆ 1 ನೇ ಪ್ರತಿವಾದಿಯು ವಿದ್ಯುಚ್ಛಕ್ತಿ ಸಂಪರ್ಕವನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

ನನಗೆ ಈಗ ಸುಮಾರು 48 ವರ್ಷ ವಯಸ್ಸಾಗಿರುತ್ತದೆ. ನಾನು 8 ನೇ ತರಗತಿಯವರೆಗೂ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಹುಟ್ಟಿದ ದಿನಾಂಕ 15.08.1975 ಆಗಿರುತ್ತದೆ. ವಾದಿಯು 4 ಗುಂಟೆ ಜಮೀನನ್ನು 1 ನೇ ಪ್ರತಿವಾದಿಗೆ ದಿನಾಂಕ 15.08.1990 ರ ನೊಂದಾಯಿತವಲ್ಲದ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.
ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ